# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಭಾಷಾಂತರ ಅಧ್ಯಯನ ವಿಭಾಗ

## ಮತ್ತು ಎಸ್ ಯು ಬಿ ಎನ್ ಥಿಯೋಸಾಫಿಕಲ್ ಮಹಿಳಾ ಮಹಾವಿದ್ಯಾಲಯ, ಹೊಸಪೇಟೆ

## ಇವರ ಸಹಯೋಗದಲ್ಲಿ

**ವೈ. ಕೆ. ರಾಮಯ್ಯ ದತ್ತಿ ನಿಧಿ ವಿಶೇಷ ಉಪನ್ಯಾಸ ಕಾರ್ಯಕ್ರಮ** ದಿನಾಂಕ ೨೦.೦೭.೨೦೨೪

**ವಿಷಯ : 'ಹಳಗನ್ನಡ ಕಾವ್ಯ ವ್ಯಾಖ್ಯಾನ'**




ಹಳಗನ್ನಡ ಕಾವ್ಯಗಳ ಓದಿನಿಂದ ವರ್ತಮಾನ ಮತ್ತು ಭವಿಷ್ಯಕ್ಕೆ ಬದುಕಿನ ಮೌಲ್ಯಗಳು ದಕ್ಕುತ್ತವೆ ಎಂದು ಡಾ. ರತ್ನಾಕರ ಮಲ್ಲಮೂಲೆ ಹೇಳಿದರು. ಅವರು ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಎಸ್ ಯು ಬಿ ಎನ್ ಥಿಯೋಸಾಫಿಕಲ್ ಮಹಿಳಾ ಮಹಾವಿದ್ಯಾಲಯ ಹೊಸಪೇಟೆ ಇವರ ಸಹಯೋಗದಲ್ಲಿ ಆಯೋಜಿಸಿದ ವೈ. ಕೆ. ರಾಮಯ್ಯ ದತ್ತಿ ನಿಧಿ ಕಾರ್ಯಕ್ರಮದಲ್ಲಿ 'ಹಳಗನ್ನಡ ಕಾವ್ಯ ವ್ಯಾಖ್ಯಾನ' ವಿಷಯದಲ್ಲಿ ಉಪನ್ಯಾಸ ನೀಡುತ್ತಿದ್ದರು. ಮುಂದುವರೆದು ಚರಿತ್ರೆಯ ಓದಿಗಿಂತ ಕಾವ್ಯಗಳ ಓದು ಭಿನ್ನವಾಗಿದ್ದು, ಪ್ರಾಚೀನ ಕಾಲದ ಕಾವ್ಯಗಳು ಸಮಕಾಲೀನ ಸಂದರ್ಭಕ್ಕೂ ಹೊಸ ಅರ್ಥವನ್ನು ಸ್ಫುರಿಸುತ್ತವೆ ಎಂದು ಅವರು ಹೇಳಿದರು.










ಕಾರ್ಯಕ್ರಮವನ್ನು ಉದ್ಘಾಟಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಡಿ. ವಿ. ಪರಮಶಿವಮೂರ್ತಿ ಅವರು ಹಳಗನ್ನಡ ಕಾವ್ಯಗಳು ವರ್ತಮಾನದ ಓದುಗರಿಗೆ ತಮ್ಮ ಪೂರ್ವಿಕರ ಜೀವನ ವಿಧಾನ, ಅವರ ಆಲೋಚನಾ ಮೌಲ್ಯಗಳನ್ನು ತಿಳಿಸುತ್ತವೆ. ಕಾವ್ಯಗಳ ಓದಿನಿಂದ ಎಂತಹ ಕಲ್ಲುಹೃದಯವು ಸಹ ಹೂವಿನಂತೆ ಮೃದುವಾಗುತ್ತದೆ ಎಂದು ಅವರು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಯು. ರಾಘವೇಂದ್ರ ರಾವ್ ಅವರು ಪ್ರಾಚೀನ ಕಾವ್ಯಗಳ ಆಪ್ತ ಓದಿನಿಂದ ವಾಸ್ತವದಲ್ಲಿಯೂ ಅದರೊಂದಿಗೆ ಮಾತನಾಡಬಹುದು. ಹಾಗಾಗಿಯೇ ಸಾಹಿತ್ಯ ಎನ್ನುವುದು ಜನಜೀವನದ ಕೈಗನ್ನಡಿಯಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದ ಭಾಷಾಂತರ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಎ. ಮೋಹನ ಕುಂಟಾರ್ ಅವರು ರೇಷ್ಮೆರಾಜನೆಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ಮಾಜಿ ಸಚಿವರಾದ ಶ್ರೀ ವೈ.ಕೆ.ರಾಮಯ್ಯ ಅವರ ಪರಿಚಯದ ಜೊತೆಗೆ ಭಾಷಾಂತರ ಚಟುವಟಿಕೆಗಳು ವಿಶ್ವವಿದ್ಯಾಲಯದ ಆವರಣದ ಒಳಗೆ ನಡೆಯುವುದರ ಜೊತೆಗೆ ಆವರಣದ ಹೊರಗೂ ವಿಸ್ತರಿಸುವಲ್ಲಿ ಇಂತಹ ದತ್ತಿನಿಧಿ ಉಪನ್ಯಾಸಗಳು ಪೂರಕವಾಗಿವೆ. ಭಾಷಾಂತರ ಎನ್ನುವುದು ಎರಡು ದೇಶ, ಭಾಷೆ, ಕಾಲಮಾನಗಳ ಸಾಂಸ್ಕೃತಿಕ ಸಂಬಂಧಗಳ ಮರುನಿರೂಪಣೆಯಾಗಿದೆ. ಆ ಕಾರಣಕ್ಕಾಗಿಯೇ ಹಳಗನ್ನಡ ಕಾವ್ಯಗಳೂ ಕಾಲಾತೀತವಾಗಿಯೂ ಸಮಕಾಲೀನವಾಗಿ ಸ್ಪಂದನಶೀಲವಾಗಿ ಓದಿಗೆ ಒದಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸುವುದರ ಮೂಲಕ ಹಳಗನ್ನಡ ಕಾವ್ಯಗಳು ಹಳೆಬೇರು ಹೊಸ ಚಿಗುರು ಇದ್ದಂತೆ ಎಂದು ಎಸ್ ಯು ಬಿ ಎನ್ ಥಿಯೋಸಾಫಿಕಲ್ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲರು ಡಾ. ಅನಸೂಯ ಅಂಗಡಿ ಅವರು ಹೇಳಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ

